ಕೊಡುತ್ತಿದ್ದೀರಿ, ನಾನು ಅದರ ಬಗ್ಗೆ ಮೆಚ್ಚಿಗೆ ಸೂಚಿಸುತ್ತೇನೆ. ಅದು ಇವತ್ತಿನದಿವಸ ಅವಶ್ಯಕತೆ ಇದೆ. ನಾವು ಪ್ರಪಂಚದಿಂದ ಪ್ರತ್ಯೇಕವಾಗಿರುವುದಕ್ಕೆ ಆಗುವುದಿಲ್ಲ. ಇದನ್ನು ನಾನು ಒಪ್ಪುತ್ತೇನೆ. ಅದೇ ರೀತಿಯಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕಾಗಿರತಕ್ಕಂಥ ಅವಶ್ಯಕತೆ ಇವತ್ತಿನ ದಿವಸ ಇದೆ. ನಮ್ಮ ರಾಜ್ಯದಲ್ಲಿ ಇವತ್ತು ಈ ತೋಟಗಾರಿಕಾ ಬೆಳೆಗಳಿಗೆ ಬಹಳ ಪ್ರಾಶಸ್ತ್ಯವಾದ ವಾತಾವರಣ ಇದೆ. ನಮ್ಮ ರಾಜ್ಯದಲ್ಲಿ ಬೆಳಯದೇ ಇರತಕ್ಕ ಹಣ್ಣುಗಳು ಇಲ್ಲ. ಕೆಲವು ಎಕ್ಸಾಟಿಕ್ ಆಗಿರತಕ್ಕಂಥವುಗಳನ್ನು ಬಿಟ್ಟರೆ ಉಳಿದಂಥ ಎಲ್ಲಾ ಹಣ್ಣುಗಳನ್ನು ಮತ್ತು ತರಕಾರಿಗಳನ್ನು ಬೆಳೆಯತಕ್ಕಂಥ ವಾತಾವರಣ ಮತ್ತು ಅವಕಾಶ ನಮ್ಮ ರಾಜ್ಯದಲ್ಲಿ ಇದೆ. ಆದರೆ, ಸಂಸ್ಕರಣೆ ವಿಚಾರದಲ್ಲಿ ಮಾತ್ರ ನಾವು ಸೊನ್ನೆ ಅಕಸ್ಮಾತ್ ಏನೋ ಸ್ವಲ್ಪ ಮಟ್ಟಿಗೆ ಸಂಸ್ಕರಣೆಗೆ ಒಳಪಡುತ್ತಾ ಇದೆ. ಅದನ್ನು ಹೆಚ್ಚಿಗೆ ಬಲಪಡಿಸಬೇಕಾಗಿರುವುದು ಅವಶ್ಯಕತೆ ಇದೆ. ಅದರಿಂದ, ನಾನು ಹೇಳಿರತಕ್ಕಂಥ ಕೆಲವು ವಿಚಾರಗಳನ್ನು ತಾವು ತಿದ್ದುಪಡಿ ತರುವುದರ ಮೂಲಕ ಅಳವಡಿಸಬೇಕು. ಈಗ ತಾವೇನು ತರಬೇಕೆಂದು ಹೊರಟಿದ್ದೀರಿ, ಈ ಹೆಜ್ಜೆಗಳನ್ನು ಹಿಂದೆ ಇಡಬೇಕೆಂಬ ಮನವಿಯನ್ನು ಮಾಡಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ :– ವಿಧೇಯಕದ ಮೇಲಿನ ಚರ್ಚೆ ನಾಳೆಗೆ ಮುಂದುವರಿಯುತ್ತದೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 15 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 25.3.03ನೇ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)

11. ಅನುಬಂಧ - I

ಸೂಳ್ಯ ತಾಲ್ಲೂಕಿನಲ್ಲಿ ಚಾಲ್ತಿಯಲ್ಲಿರುವ ಬೀಡಿಗಳು

1734 (2233) ಶ್ರೀ ಅಂಗಾರ ಎಸ್. (ಸುಳ್ಯ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬೀಡಿ ಕಾರ್ಮಿಕರು ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು.

ಆ) ಸುಳ್ಯ ತಾಲ್ಲೂಕಿನಲ್ಲಿರುವ ಬೀಡಿ ಕಾರ್ಮಿಕರು ಯಾವ ಯಾವ ಬೀಡಿ ಮಾರ್ಕಿನ ಬೀಡಿಗಳನ್ನು ಕಟ್ಟುವ ಕೆಲಸ ಮಾಡುತ್ತಿದ್ದಾರೆ.

ಇ) ಸುಳ್ಯ ತಾಲ್ಲೂಕಿನಲ್ಲಿ ಯಾವ ಯಾವ ಮಾರ್ಕಿನ ಬೀಡಿಗಳು ಚಾಲ್ತಿಯಲ್ಲಿವೆ.

ಶ್ರೀ ಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ) ತಾಲ್ಲೂಕು	ಬೀಡಿ ಕಾರ್ಮಿಕರ ಸಂಖ್ಯೆ
1. ಮಂಗಳೂರು	1,11,091
2. ಭಂಟ್ವಾಳ	39,531
3. ಬೆಳ್ತಂಗಡಿ	9,112
4. ಪುತ್ತೂರು	27,699
5. ಸುಳ್ಯ	3,039
ಒಟ್ಟು	1,90,427

ಅ) 1. ಗಣೇಶ ಬೀಡಿ

2. ಜೆ.ಸಿ. ಬೀಡಿ

3. ಸದರನ್ ಇಂಡಿಯಾ ಬೀಡಿ

4. ಸಂತೋಷ್ ಬಿಡಿ

ಇ) ಮೆ: ದೀಪಕ್ ಎಂಟರ್ ಪ್ರೈಸೆಸ್‌ರವರಿಂದ ತಯಾರಿಸಲ್ಪಟ್ಟ ಗಣೇಶ ಬೀಡಿಗಳು ಚಾಲ್ತಿಯಲ್ಲಿವೆ.

ಶಿವಮೊಗ್ಗ ಜಿಲ್ಲೆಯ ರಾಜ್ಯ ಹೆದ್ದಾರಿಗಳ ನಿರ್ವಹಣೆ

1735 (1458) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ರಾಜ್ಯ ಹೆದ್ದಾರಿಗಳ ನಿರ್ವಹಣೆಗಾಗಿ ಪ್ಯಾಕೇಜ್ ಟೆಂಡರ್ ಪಡೆದ ಗುತ್ತಿಗೆದಾರರು ನಿಗದಿತ ಕೆಲಸ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೆಲಸ ನಿರ್ವಹಿಸದ ಗುತ್ತಿಗೆದಾರರ ಮೇಲೆ ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ನಿಗದಿತ ಕೆಲಸವನ್ನು ಮುಂದುವರೆಸಲು ಬದಲಿ ವ್ಯವಸ್ಥೆ ಬಗ್ಗೆ ಸರ್ಕಾರ ಚಿಂತನೆ ಮಾಡಿದೆಯೇ; ಯಾವಾಗ ಕೆಲಸ ಪ್ರಾರಂಭವಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಹೌದು.

ಗುತ್ತಿಗೆದಾರರು ಮೊದಲನೇ ವರ್ಷದ ಕಾಮಗಾರಿಗಳನ್ನು ಮುಗಿಸುವಲ್ಲಿ ಎರಡು ತಿಂಗಳು ವಿಲಂಬವಾಗಿದ್ದು, ಸದರಿ ಕೆಲಸಗಳನ್ನು 31.07.2002ರಲ್ಲಿ ಮುಗಿಸಿದ್ದಾರೆ.

ಆ) ಈ ವಿಳಂಬಕ್ಕಾಗಿ ಗುತ್ತಿಗೆದಾರರಿಗೆ 63.91 ಲಕ್ಷ ರೂ.ಗಳ ದಂಡ ವಿಧಿಸಲಾಗಿದೆ.

ಇ) ಗುತ್ತಿಗೆದಾರರು ಈಗಾಗಲೇ ಮೊದಲನೆಯ ವರ್ಷದ ಕೆಲಸ ಮುಗಿಸಿ ಎರಡನೆಯ ವರ್ಷದ ಕೆಲಸವನ್ನು ಮುಂದುವರೆಸಿರುವುದರಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ರಾಜ್ಯಾದ್ಯಂತ ಹೊಲಿಗೆ ಕಾರ್ಮಿಕರ ಕಲ್ಯಾಣಕ್ಕಾಗಿ ಕ್ಷೇಮ ನಿಧಿ ಸ್ಥಾಪಿಸುವುದು

1736 (2352) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಸಂಘಟಿತ ಹೊಲಿಗೆ ಕಾರ್ಮಿಕರ ಕಲ್ಯಾಣಕ್ಕಾಗಿ ಕ್ಷೇಮ ನಿಧಿ ಮಂಡಳಿ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಆ) ರಾಜ್ಯಾದ್ಯಂತ ಇದುವರೆವಿಗೂ ಹೊಲಿಗೆ ಕಾರ್ಮಿಕ ಸಂಘಟನೆಗಳು ಸರ್ಕಾರಕ್ಕೆ ಮನವಿ ಸಲ್ಲಿಸಿರುವ ಬಗ್ಗೆ ಸರ್ಕಾರದ ನಿಲುವೇನು;

ಇ) ಈ ಸಾಲಿನಲ್ಲಿ ಮಂಡಿಸುವ ಅಸಂಘಟಿತ ಕಾರ್ಮಿಕ ಕಲ್ಯಾಣ ವಿಧೇಯಕದಲ್ಲಿ ಹೊಲಿಗೆ ಕೆಲಸಗಾರರನ್ನು ಸೇರ್ಪಡೆಗೊಳಿಸಲು ಸರ್ಕಾರ ಚಿಂತಿಸಿದೆಯೇ?

ಶ್ರೀ ಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ) ಅಸಂಘಟಿತ ಹೊಲಿಗೆ ಕಾರ್ಮಿಕರಿಗೆಂದೇ ಪ್ರತ್ಯೇಕವಾದ ಕ್ಷೇಮ ನಿದಿ ಮಂಡಳಿಯನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇಲ್ಲ.